ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆನಂದರಾವ್ ವೃತ್ತ, ಬೆಂಗಳೂರು – 560 009

ಸಂಖ್ಯೆ:ಜೆಡಿಎಂ/ಕೆಪಿಎಂಇ/69/2020-21

ದಿನಾಂಕ : 06-04-2020

## ಸುತ್ತೋಲೆ

**ವಿಷಯ : ಕೋವಿಡ್-19 ಮೇಲ್ವಿಚಾರಣಾ ವಿಧಾನದ ತಂತ್ರಾಂಶದಲ್ಲಿ ದತ್ತಾಂಶವನ್ನು ನಮೂದಿಸುವ ಬಗ್ಗೆ.**

**ಉಲ್ಲೇಖ : ಸಂಚಿತ ಯೋಜನೆಯ ರಚನೆ ಕುರಿತಂತೆ ರಾಜ್ಯ ಸಚಿವ ಸಂಪುಟ ಉಪ ಸಮಿತಿ ಅನುಮೋದನೆ ದಿನಾಂಕ : 03-04-2020.**

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಸಚಿವ ಸಂಪುಟ ಉಪ ಸಮಿತಿಯ ಅನುಮೋದನೆಯಾಗಿರುವ ಸಂಚಿತ ಯೋಜನೆಯು ಭವಿಷ್ಯದಲ್ಲಿ ನಡೆಯಬಹುದಾದ ಅಥವಾ ನಡೆಯದೇ ಇರಬಹುದಾದ ಪ್ರಮುಖ ಘಟನೆಯೊಂದಕ್ಕೆ ಪರಿಣಾಮಕಾರಿ ಪ್ರತಿಕ್ರಿಯೆ ನೀಡಲು ವಿನ್ಯಾಸಗೊಳಿಸಿರುವ ಯೋಜನೆಯಾಗಿರುತ್ತದೆ. ಅದರ ಒಂದು ಭಾಗವಾಗಿ ಕೋವಿಡ್-19ರ ಮೇಲ್ವಿಚಾರಣಾ ವಿಧಾನವನ್ನು ಸಿದ್ಧಪಡಿಸಲಾಗಿದೆ.

ಕೋವಿಡ್-19ಕ್ಕೆ ಸಂಬಂಧಿಸಿದಂತೆ, ಸಂಪನ್ಮೂಲಗಳ ಹೆಚ್ಚಿಸುವಿಕೆ, ಸೂಕ್ತ, ಸಮನ್ವಯ, ಮೇಲ್ವಿಚಾರಣೆ ಮತ್ತು ಪುನರ್ ವಿಮರ್ಶೆಗೆ ಅನುಕೂಲವಾಗುವಂತೆ ಫೀವರ್ ಕ್ಲಿನಿಕ್, ನಿರ್ಬಂಧನ ಕೇಂದ್ರಗಳು (Quarantine Center), ಪ್ರತ್ಯೇಕ ನಿಗಾ ಕೇಂದ್ರಗಳು (Isolation Center), ಕೋವಿಡ್-19 ಆಸ್ಪತ್ರೆಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಅನುಮೋದಿತ ವಿಪತ್ತು ನಿರ್ವಹಣಾ ಯೋಜನೆ (Contigency Plan) ಯಲ್ಲಿ ವಿವರಿಸಲಾಗಿದೆ ಹಾಗೂ ಕೋವಿಡ್-19 ಮೇಲ್ವಿಚಾರಣೆ ವಿಧಾನದ ತಂತ್ರಾಂಶದಲ್ಲೂ ಇದೇ ಮಾದರಿಯನ್ನು ಅನುಸರಿಸಲಾಗಿದೆ.

ಕೋವಿಡ್-19 ಮೇಲ್ವಿಚಾರಣಾ ವಿಧಾನಕ್ಕೆ ಪ್ರಾಥಮಿಕ ಮಾಹಿತಿಯನ್ನು ಅಳವಡಿಸಲು ಹಾಗೂ ಜಿಲ್ಲಾ ಮಟ್ಟದಲ್ಲಿ ಇದರ ಉಸ್ತುವಾರಿಯನ್ನು ನೋಡಿಕೊಳ್ಳಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಮ್ಮ ಅಧೀನದಲ್ಲಿರುವ ಜಿಲ್ಲಾ ಸರ್ವೇಕ್ಷಣಾಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಕಮಾಡಬೇಕು. ಈ ಅಧಿಕಾರಿಯು ಅನುಮೋದಿತ ವಿಪತ್ತು ನಿರ್ವಹಣಾ ಯೋಜನೆ ಕ್ರಮಗಳನ್ನು ಅನುಸರಿಸಿ ಫೀವರ್ ಕ್ಲೀನಿಕ್, ನಿರ್ಬಂಧನಾ ಕೇಂದ್ರಗಳು, ಪ್ರತ್ಯೇಕ ನಿಗಾವಣೆ ಕೇಂದ್ರಗಳ, ಕೋವಿಡ್-19 ಆಸ್ಪತ್ರೆಗಳ ಉಸ್ತುವಾರಿಗೆ ಒಬ್ಬರು ಅಧಿಕಾರಿಯನ್ನು ನಿಯೋಜಿಸಬೇಕು ಮತ್ತು ಅಧಿಕಾರಿಗೆ ತಂತ್ರಾಂಶದ ಬಳಕೆಗೆ ಸಂಬಂಧಸಿದ ಯುಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಸೃಜಿಸಿ ಫೀವರ್ ಕ್ಲಿನಿಕ್, ನಿರ್ಬಂಧನಾ ಕೇಂದ್ರಗಳು, ಪ್ರತ್ಯೇಕ ನಿಗಾವಣೆ ಕೇಂದ್ರಗಳು, ಕೋವಿಡ್-19 ಆಸ್ಪತ್ರೆಗಳ ಮಾಹಿತಿಯನ್ನು ತಂತ್ರಾಂಶಕ್ಕೆ ಅಡಕಗೊಳಸುವಂತೆ ಸೂಚಿಸಬೇಕು ಮತ್ತು ಈ ಬಗ್ಗೆ ನಿಗದಿತ ಸಮಯದಲ್ಲಿ ಎಲ್ಲಾ ಕೇಂದ್ರಗಳಿಂದ ಮಾಹಿತಿಯನ್ನು ನಿಯಮಿತವಾಗಿ ನಮೂದಿಸುವ ಜವಾಬ್ದಾರಿಯು ನೋಡಲ್ ಅಧಿಕಾರಿಯದ್ದೇ ಆಗಿರುತ್ತದೆ. ತಂತ್ರಾಂಶಕ್ಕೆ ಮಾಹಿತಿಯನ್ನು ಸೇರಿಸಲು ಬಳಕೆದಾರರ ಕೈಪಿಡಿಯನ್ನು ಮತ್ತು ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿರುವ ತಾಂತ್ರಿಕ ಸಿಬ್ಬಂದಿಯ ಸಹಕಾರವನ್ನು ಪಡೆಯಬಹುದಾಗಿದೆ.

ಫೀವರ್ ಕ್ಲಿನಿಕ್, ನಿರ್ಬಂಧಿತ ಕೇಂದ್ರಗಳು, ಪ್ರತ್ಯೇಕ ನಿಗಾವಣೆ ಕೇಂದ್ರಗಳು, ಕೋವಿಡ್-19 ಆಸ್ಪತ್ರೆಗಳಲ್ಲಿ ದಾಖಲಾಗಿರುವ ಶಂಕಿತ/ಸೋಂಕಿತ ರೋಗಿಗಳ ಸಂಖ್ಯೆ ಹಾಗೂ ಕೇಂದ್ರಗಳಲ್ಲಿ ಇರುವ ಮೂಲ ಸೌಕರ್ಯದ ಮಾಹಿತಿ ಹಾಗೂ ಲಭ್ಯವಿರುವ ಅಗತ್ಯ ಮುಖಗವಸು, ಗ್ಲೌಸ್, ಮತ್ತು ಕೈಶುಚಿಗೊಳಿಸಲು ಅಗತ್ಯ ಮಾರ್ಜಕಗಳು, ಹಾಗೂ ಇತ್ಯಾದಿ ಪೂರಕ ಪರಿಕರಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ನಮೂದಿಸುವುದು ಬಹಳ ಮುಖ್ಯವಾಗಿರುತ್ತದೆ. ಈ ಮಾಹಿತಿಯನ್ನು ನಿಯೋಜಿತ ಅಧಿಕಾರಿಯು ದಿನಕ್ಕೆ ಮೂರು ಬಾರಿ ತಂತ್ರಾಂಶಕ್ಕೆ ಒದಗಿಸಬೇಕಾಗಿರುತ್ತದೆ. ಇದರಿಂದ ಯಾವ ಕೇಂದ್ರಗಳಲ್ಲಿ ಅಗತ್ಯ ಪರಿಕರಗಳ ಅಗತ್ಯತೆ ಮತ್ತು ಕೊರತೆ ಇರುವುದರ ಖಚಿತ ಮಾಹಿತಿಯು ಕೇಂದ್ರ ಕಛೇರಿಗೆ ಲಭಿಸುವುದರಿಂದ ಅಗತ್ಯ ಕ್ರಮಗಳನ್ನು ಅನುಸರಿಸುವುದರ ಮೂಲಕ ಕೋವಿಡ್-19ನ್ನು ಪರಿಣಾಮಕಾರಿಯಾಗಿ ಎದುರಿಸಬಹುದಾಗಿರುತ್ತದೆ.

ತಂತ್ರಾಂಶದ ಬಳಕೆಯ ಬಗ್ಗೆ ದಿನಾಂಕ 03-04-2020 ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಕಂದಾಯ ಇಲಾಖೆಯ (ವಿಪತ್ತು ನಿರ್ವಹಣೆ) ಸಹಯೋಗದೊಂದಿಗೆ ಯೂಟೂಬ್ ಚಾನಲ್ ಮೂಲಕ ತರಬೇತಿ ನೀಡಲಾಗಿದೆ. ಹಾಗೂ ಅಂತರ್ಜಾಲದಲ್ಲಿ ತರಬೇತಿಯ ವಿಡಿಯೋವನ್ನು ಅಡಕ ಮಾಡಲಾಗಿದೆ. **(https://www.youtube.com/channel/UCjJ_NNwB9m8_OocGo1Zfcg).** ತಂತ್ರಾಂಶ ಮತ್ತು ದತ್ತಾಂಶಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಸಹ ನಿರ್ದೇಶಕರು, ವೈದ್ಯಕೀಯ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರನ್ನು ಸಂಪರ್ಕಿಸುವುದು.

ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರಬಯುಸುತ್ತಾ ಜಿಲ್ಲಾ ಮಟ್ಟದಲ್ಲಿ ಕೋವಿಡ್-19 ಮೇಲ್ವಿಚಾರಣಾ ವಿಧಾನದ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ, ನಿಯಮಿತ ಸಮಯದಲ್ಲಿ ದತಾಂಶವನ್ನು ನಮೂದಿಸುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

7-4-20

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕರು.
2. ಎಲ್ಲಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
5. ಯೋಜನಾ ನಿರ್ದೇಶಕರು, (ಐ.ಡಿ.ಎಸ್.ಪಿ.), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
6. ಸಹ ನಿರ್ದೇಶಕರು, ಸಿ.ಎಂ.ಡಿ./ವೈದ್ಯಕೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

# Login credentials

| Sl.No | District | Login | Password |
|---|---|---|---|
| 1 | Bagalkot | bagalkot@dm.com | baga#123 |
| 2 | Bangalore Rural | bangalorerural@dm.com | bang#123 |
| 3 | Bangalore urban | bangaloreurban@dm.com | bang#123 |
| 4 | Belgaum | belgaum@dm.com | belg#123 |
| 5 | Bellary | bellary@dm.com | bell#123 |
| 6 | Bidar | bidar@dm.com | bida#123 |
| 7 | Bijapur | bijapur@dm.com | bija#123 |
| 8 | Chamarajanagar | chamarajanagar@dm.com | cham#123 |
| 9 | Chikkaballapura | chikkaballapura@dm.com | chik#123 |
| 10 | Chikmagalur | chikmagalur@dm.com | chik#123 |
| 11 | Chitradurga | chitradurga@dm.com | chit#123 |
| 12 | Dakshina Kannada | dakshinakannada@dm.com | daks#123 |
| 13 | Davanagere | davanagere@dm.com | dava#123 |
| 14 | Dharwad | dharwad@dm.com | dhar#123 |
| 15 | Gadag | gadag@dm.com | gada#123 |
| 16 | Hassan | hassan@dm.com | hass#123 |
| 17 | Haveri | haveri@dm.com | have#123 |
| 18 | Kalaburagi | kalaburagi@dm.com | kala#123 |
| 19 | Kodagu | kodagu@dm.com | koda#123 |
| 20 | Kolar | kolar@dm.com | kola#123 |
| 21 | Koppal | koppal@dm.com | kopp#123 |
| 22 | Mandya | mandya@dm.com | mand#123 |
| 23 | Mysore | mysore@dm.com | myso#123 |
| 24 | Raichur | raichur@dm.com | raic#123 |
| 25 | Ramanagara | ramanagara@dm.com | rama#123 |
| 26 | Shimoga | shimoga@dm.com | shim#123 |
| 27 | Tumkur | tumkur@dm.com | tumk#123 |
| 28 | Udupi | udupi@dm.com | udup#123 |
| 29 | Uttara Kannada | uttarakannada@dm.com | utta#123 |
| 30 | Yadgir | yadgir@dm.com | yadg#123 |